ಮೊದಲೆಲ್ಲ ಮನೆಯಲ್ಲೇ ಇರುತ್ತಿದ್ದ ಅವಳೀಗ ಅಡುಗೆ ಕೆಲಸ, ಕ್ಯಾಟರಿಂಗ್ ಹಾಗೂ ಬಡಿಸುವ ಗುಂಪುಗಳಿಗೆ ಸಹಾಯಕಳಾಗಿ ಹೋಗುತ್ತಾ ದಿನವಿಡೀ ಮನೆಯಿಂದ ಆಚೆಯೇ ಕಾಲ ಕಳೆಯುತ್ತಿದ್ದಳು. ಅಲ್ಲಿ ಹೊಸ ಹೊಸ ಜನರ ಜೊತೆ ಬೆರೆಯುತ್ತಾ, ಉತ್ಸಾಹದಿಂದ ಓಡಾಡುತ್ತಾ, ಎಲ್ಲರೊಳಗೊಂದಾಗುತ್ತಾ ಇರುವ ಕ್ಷಣಗಳು ಆಕೆಯನ್ನು ತೀವ್ರವಾಗಿ ಸೆಳೆಯುತ್ತಿದ್ದವು. ಮೊದಲೆಲ್ಲ ಬೆಳಗ್ಗೆ ಬೇಗ ಎದ್ದು ಮಗನಿಗೆ ತಿಂಡಿ, ಊಟ ಮಾಡಿಟ್ಟು ಹೋಗುತ್ತಿದ್ದ ಆಕೆಯೀಗ ಏನೂ ಮಾಡಿಡದೇ ನೇರ ಹೋಗಿಬಿಡುತ್ತಿದ್ದಳು. ವಾರಕ್ಕೊಂದು, ಎರಡು ಎಂಬಂತಿದ್ದ ಆಕೆಯ ಅಡುಗೆಯ ಕೆಲಸವೀಗ ಪ್ರತಿದಿನದ ಹಗಲಿನಂತೆ ಪುನರಪಿಯಾಗಿ ಬದಲಾಗಿತ್ತು. ಅವಳೀಗ ಅವನಿಗೆ, ಈ ಮನೆಗೆ ಯಾವ ರೀತಿಯಲ್ಲೂ ಸಂಬಂಧ ಪಡದ, ಎಲ್ಲೋ ಗೂಡನ್ನು ಬಿಟ್ಟು ಕೇವಲ ಆಹಾರ ಸೇವನೆಗಷ್ಟೇ ಇಲ್ಲಿಗೆ ಬಂದು ಹೋಗುವ ವಲಸೆ ಹಕ್ಕಿಯಾಗಿದ್ದಳು. ಅವಳು ಕೆಲಸಕ್ಕೆ ಹೋಗಿ ಬಿಕೋ ಎನ್ನುವ ಮನೆಯ ಜಗುಲಿ, ಪಡಸಾಲೆಗಳಲ್ಲಿ ಮುನೀರ ಸುಮ್ಮನೆ ಮಲಗುತ್ತಿದ್ದ. ಒಳಗಿದ್ದಾಗ ಹೊರಗಿಗೆ ಸಂಬಂಧಿಸಿದವನಂತೆ, ಹೊರ ಬಂದಾಗ ಒಳಹೋಗಲು ತುಡಿಯುವವನಂತೆ ಒದ್ದಾಡುತ್ತಿದ್ದ. ಎರಡು ಬೇರೆ ಬೇರೆ ಭಾಗಗಳಾದ ತಮ್ಮಿಬ್ಬರನ್ನೂ ಅಪ್ಪನೆಂಬ ಜೀವ ಒಂದು ಬೆಸುಗೆಯಲ್ಲಿ ಹಿಡಿದಿಟ್ಟುಕೊಂಡಿತ್ತು. ಈಗ ಅದು ಇಲ್ಲವಾದ ಮೇಲೆ ತಾನು ಅಮ್ಮನಿಗೆ ಸಂಬಂಧ ಪಡದ ಅನಾಥ ಕೊಂಡಿಯಾಗಿದ್ದೇನೆ ಎಂದೆಲ್ಲ ಅನಿಸಿ ಅವನಿಗೆ ದುಃಖವಾಗುತ್ತಿತ್ತು. ಆದರೆ ತನ್ನ ಹೊರತಾದ ಇನ್ಯಾವುದೋ ಖುಷಿಯಲ್ಲಿ ಬೆರೆತು ಹೋಗಿರುವವಳನ್ನು ಬಲವಂತವಾಗಿ ಎಳೆದು ತರುವ ಮನಸ್ಸಾಗದೆ, ಆ ಒಬ್ಬಂಟಿ ಮೌನವನ್ನು ಸಹಿಸುತ್ತಾ ಅವನು ಮನೆಯಲ್ಲೇ ಇರುತ್ತಿದ್ದ. ಅಪ್ಪನೊಂದಿಗೆ ತಾನು ಕಳೆದ ಕಡೆಯ ಕ್ಷಣಗಳ ಖುಷಿಯನ್ನು, ತೀರದ ಮರಳ ಮೇಲೆ ಬರೆದ, ಅಳಿಸಲೇ ಬೇಕಾದ ಚಿತ್ರಗಳಂತೆ ಮರು ಸೃಷ್ಟಿಸುತ್ತಾ ತನ್ನಷ್ಟಕ್ಕೇ ನಗುತ್ತಿದ್ದ, ಅಳುತ್ತಿದ್ದ.

* * *

'ಮಾಮೂ, ಎಕ್ಸಾಮಷ್ಟೂ ಮುಗೀತು. ನಾಳೆಯಿಂದ ರಜಾ!'

ಎಸ್ಸೆಸ್ಸೆಲ್ಸಿಯ ಕಟ್ಟ ಕಡೆಯ ಪರೀಕ್ಷೆ ಬರೆದು ಮುಗಿಸಿ ಮನೆಗೆ ಬಂದ ಮುನ್ನಿ ಹಾಗೆಂದು ಹೇಳಿದಾಗ ತನ್ನದೇ ಎಕ್ಸಾಮು ಮುಗಿದಂತೆ ಖುಷಿಯಾದ ಮುನೀರ. ಇನ್ನೂ ಎರಡು ತಿಂಗಳ ದೀರ್ಘಾವಧಿಯಲ್ಲಿ ಹರಡಿಕೊಂಡು ಕಣ್ಣೆದುರು ನಿಂತಿರುವ ರಜೆಯಲ್ಲಿ ಏನು ಮಾಡುವುದು ಎನ್ನುವುದೇ ಇಬ್ಬರಿಗೂ ಅರ್ಥವಾಗಲಿಲ್ಲ. ಅದಕ್ಕೆ ಉತ್ತರವನ್ನೂ ಮುನ್ನಿಯೇ ಕಂಡುಹಿಡಿದ. ಮಾರನೇ ದಿನ ಸೂರ್ಯ ಬೆಟ್ಟಗಳ ಉಣಗೋಲು ದಾಟಿ ಅಂಗಳಕ್ಕಿಳಿದ ಹೊತ್ತಿಗೆಲ್ಲಾ ಅವರಿಬ್ಬರೂ ಗುದ್ದಲಿ ಪಿಕಾಸಿ ಹಿಡಿದು ಗುಡ್ಡ ಏರುತ್ತಿದ್ದರು. ಮುನ್ನಿಯ ಮನೆಗೆ ಸೇರಿದ್ದ, ಆಳೆತ್ತರಕ್ಕೆ ಕರಡ ಬೆಳೆದ ಜಾಗದುದ್ದಕ್ಕೂ ಸರಪರನೆ ಕತ್ತಿ ಹರಿಸಿ ಹುಲ್ಲು ಕಡಿದರು. ಮಧ್ಯಾಹ್ನ ಬಿಸಿಲು ಏರುವ ವೇಳೆಗೆ ಅಲ್ಲೇ ಪಕ್ಕದಲ್ಲಿ ಗೇರು ಮರ ಹಾಸಿದ್ದ ನೆರಳಿನಡಿಗೆ ದಾಖಲಾದರು. ಮನೆಯಿಂದ ಮಾಡಿಕೊಂಡು ತಂದಿದ್ದ ತಣ್ಣನೆಯ ನಿಂಬೇ ಪಾನಕವನ್ನು ಗಟಗಟನೆ ಕುಡಿದರು. ಮತ್ತೆ ಹೊಸ ಬೆಳಗು ಕಂಡವರಂತೆ ಹುರುಪಿನಲ್ಲೆದ್ದು ಕರಡ ಕಡಿದರು.

ಕೆಲವೇ ದಿನಗಳ ಕೆಳಗೆ ಅಡ್ಡಾದಿಡ್ಡಿ ಹುಲ್ಲು ಬೆಳೆದಿದ್ದ ಜಾಗದಲ್ಲೀಗ ಹಂತ ಹಂತವಾಗಿ ಮೆಣಸಿನ ಮಡಿ ಎದ್ದು ನಿಂತಿತು. ತಲಾ ಹತ್ತು ಗಿಡಗಳ ಹದಿನಾಲ್ಕು ಸಾಲುಗಳು ಉದ್ದುದ್ದಕ್ಕೆ ಬೆಳೆದು ನಿಂತವು. ಮುನೀರ ಹಾಗೂ ಮುನ್ನಿಯ ಹಗಲು - ಸಂಜೆಗಳೂ ಆ ಗಿಡಗಳ ಜೊತೆಗೇ ಚಿಗುರತೊಡಗಿದವು. ತಮ್ಮ ಜೀವನದಲ್ಲಿ ಅಮೂಲ್ಯವಾದುದೇನನ್ನೋ ಅಲ್ಲಿ ಬಿಟ್ಟು ಬಂದಂತೆ ಪ್ರತಿ ದಿನ ಅವರಿಬ್ಬರೂ ಗುಡ್ಡಕ್ಕೆ ಓಡುತ್ತಿದ್ದರು. ಮಡಿಯಲ್ಲಿ ಬೀಜ ಚಿಗುರಿ, ಗಿಡ ಬೆಳೆದು, ಹೂವರಳಿ, ಕಾಯಿ ಬಿಡುವ ತನಕದ ಮೆಣಸಿನ ಗಿಡಗಳ ಪ್ರಯಾಣದಲ್ಲಿ ತಾವೂ ಭಾಗಿಯಾದರು. ಅವಕ್ಕೆ ನೀರು ಸುರಿದಾಗೆಲ್ಲಾ ಅದು ಹೇಗೋ ಅವರ ಬಾಯಾರಿಕೆಯೂ ತಣಿಯುತ್ತಿತ್ತು. ತಾವೇ ಚಿಗುರಿ, ಅರಳಿ, ಹೂವು, ಕಾಯಾದರು. ಕೆಲಸದ ನಡುವೆ ಒಬ್ಬರು ಹೇಳುವ ಪುಟ್ಟ ಹಾಸ್ಯಕ್ಕೆ ಇಬ್ಬರೂ ಮನಸಾರೆ ನಗುತ್ತಿದ್ದರು. ನೆನ್ನೆಯ ತನಕ ತನ್ನ ಬದುಕಿನಲ್ಲಿದ್ದ ನಿರರ್ಥಕತೆಯೊಂದು ಇದ್ದಕ್ಕಿದ್ದಂತೆ ಎಲ್ಲೋ ಉಳುಚಿ ಹೋದಂತೆ ಮುನೀರನಿಗನಿಸತೊಡಗಿತು. ಮುನ್ನಿಯ ಜೊತೆ ಹರಟುತ್ತಾ, ದಾವರಿಸುತ್ತಾ, ಪಾನಕ ಕುಡಿಯುತ್ತಾ, ಮತ್ತೆ ದುಡಿಯುತ್ತಾ ಕಳೆಯುವ ಕ್ಷಣಗಳು ಅವನ ಹೃದಯದಲ್ಲೊಂದು ನೆಮ್ಮದಿಯನ್ನು ಹುಟ್ಟುಹಾಕಿದವು. ಅಮ್ಮನ ಗೈರು ಈಗವನನ್ನು